2018 ಕ.ತೀ.ವ 559

## ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿ ಶ್ರೀ ಸುಭ್ರೋ ಕಮಲ್ ಮುಖರ್ಜಿ
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬೂದಿಹಾಳ್ ಆರ್.ಬಿ.

### ಇಮಿರಾಲ್ಡ್ ಹೆವೆನ್ ಎಸ್ಟೇಟ್ಸ್ ಲಿಮಿಟೆಡ್ –ವಿರುದ್ಧ– ಕರ್ನಾಟಕ ರಾಜ್ಯ, (ಅರಣ್ಯ, ಜೀವ ಪರಿಸ್ಥಿತಿ ಮತ್ತು ಪರಿಸರ ಇಲಾಖೆ) ಮತ್ತು ಇತರರು*

ಕರ್ನಾಟಕ ಅರಣ್ಯ ಕಾಯಿದೆ, 1963 ಪ್ರಕರಣ 99 ಮತ್ತು ಪ್ರಕರಣ 2(6) ಮತ್ತು ಪ್ರಕರಣ 4(1)

ಪ್ರಸ್ತುತ ಪ್ರಕರಣದಲ್ಲಿ ಎರಡನೇ ಪ್ರತಿವಾದಿ ಅರಣ್ಯ ಅಧಿಕಾರಿ ಮೂಲ ದಾಖಲಾತಿಗಳನ್ನು ಹಾಜರುಪಡಿಸುವ ಕುರಿತು ನೀಡಿದ ನೋಟೀಸನ್ನು ಪ್ರಶ್ನಿಸಲಾಗಿದೆ. ಕರ್ನಾಟಕ ಅರಣ್ಯ ಕಾಯಿದೆ ಪ್ರಕರಣ 2(6)ರ ಅಡಿ ಅರಣ್ಯ ಅಧಿಕಾರಿಯಾಗಿದ್ದು, ಪ್ರಕರಣ 4(1)ರ ಅಡಿಯ ಅರಣ್ಯ ಪುನರ್ವಸತಿ ಅಧಿಕಾರಿಯ ಅಧಿಕಾರವನ್ನು ಚಲಾಯಿಸಿ ವಿಚಾರಣೆ ನಡೆಸಲು ಅರ್ಹತೆ ಹೊಂದಿರುವುದಿಲ್ಲ.

ಕರ್ನಾಟಕ ಅರಣ್ಯ ಕಾಯಿದೆ ಪ್ರಕರಣ 4(1)ರ ಅಡಿ ಅರಣ್ಯ ಪುನರ್ವಸತಿ ಅಧಿಕಾರಿಯು ಅರಣ್ಯದಲ್ಲಿ ಯಾವುದೇ ವ್ಯಕ್ತಿಗೆ ಇರಬಹುದಾದ ಯಾವುದೇ ತರಹದ ಹಕ್ಕುಗಳನ್ನು ಕುರಿತು ತೀರ್ಮಾನಿಸುವ ಅಧಿಕಾರವನ್ನು ಹೊಂದಿರುತ್ತಾನೆ.

ಉಚ್ಚ ನ್ಯಾಯಾಲಯವು ಈ ಪ್ರಕರಣವನ್ನು ತೀರ್ಮಾನಿಸುತ್ತಾ, ಕರ್ನಾಟಕ ಅರಣ್ಯ ಕಾಯಿದೆ ಪ್ರಕರಣ 2(6)ರ ಅಡಿ ಅರಣ್ಯ ಅಧಿಕಾರಿಯು, ಪ್ರಕರಣ 4(1)ರ ಅಡಿಯ ಅರಣ್ಯ ಪುನರ್ವಸತಿ ಅಧಿಕಾರಿಯ ಅಧಿಕಾರವನ್ನು ಚಲಾಯಿಸಿ ವಿಚಾರಣೆ ನಡೆಸಲು ಅರ್ಹತೆ ಹೊಂದಿರುವುದಿಲ್ಲ. ಎರಡೂ ಹುದ್ದೆಗಳು ಬೇರೆ ಬೇರೆಯಾಗಿವೆ. ಆದರೆ ರಾಜ್ಯ

*ರಿಟ್ ಅರ್ಜಿ ಸಂ. 41187/2016 (ಜಿಎಮ್–ಎಫ್‌ಒಆರ್) ದಿನಾಂಕ: 16ನೇ ಮಾರ್ಚ್, 2017.

**ಸರ್ಕಾರವು ಅರಣ್ಯ ಅಧಿಕಾರಿಯನ್ನು ಅರಣ್ಯ ಪುನರ್ವಸತಿ ಅಧಿಕಾರಿಯೆಂದು ಅಧ್ಯಾಯ 2ರ ಅಡಿಯ ವಿಚಾರಣೆಗಳನ್ನು ಮಾಡಲು ನೇಮಿಸುವ ಅಧಿಕಾರ ಹೊಂದಿರುತ್ತದೆ.**

**ಪ್ರಸ್ತುತ ಪ್ರಕರಣದಲ್ಲಿ ಎರಡನೇ ಪ್ರತಿವಾದಿಯು ಪ್ರಾರಂಭಿಸಿದ ವಿಚಾರಣೆಯು ಆತನ ಅಧಿಕಾರವ್ಯಾಪ್ತಿ ಮೀರಿದುದಾಗಿದೆ. ಆದ್ದರಿಂದ ಅದು ಕಾನೂನು ಬದ್ಧವಾಗಿಲ್ಲವೆಂದು ವಿಚಾರಣೆಯನ್ನು ರದ್ದುಗೊಳಸಲಾಗಿದೆ.**

ಅರ್ಜಿದಾರರ ಪರ: ಶ್ರೀ ಅರುಣ್ ಕುಮಾರ್ ಕೆ, ವಕೀಲರು ಇವರೊಟ್ಟಿಗೆ ಶ್ರೀ ಎಸ್. ವಿಜಯ್ ಶಂಕರ್ ಮತ್ತು ಶ್ರೀ ಧ್ಯಾನ್ ಚಿನ್ನಪ್ಪ, ಹಿರಿಯ ವಕೀಲರುಗಳು;

ಪ್ರತ್ಯರ್ಜಿದಾರರ ಪರ: ಶ್ರೀ ವಿ.ಜಿ. ಭಾನುಪ್ರಕಾಶ್, ಹೆಚ್ಚುವರಿ ಸರ್ಕಾರಿ ವಕೀಲರು.

## ಆಜ್ಞೆ

**ಮುಖ್ಯ ನ್ಯಾಯಮೂರ್ತಿ ಶ್ರೀ ಸುಭ್ರೋ ಕಮಲ್ ಮುಖರ್ಜಿ:**

ರಿಟ್ ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ಹಿರಿಯ ವಕೀಲರಾದ ಶ್ರೀ ಎಸ್. ವಿಜಯಶಂಕರ್‌ರವರು, ನ್ಯಾಯಾಲಯ ಸಭಾಂಗಣ ವಿವರಣಪತ್ರವನ್ನು ಮಂಡಿಸಿದ್ದಾರೆ. ಕರ್ನಾಟಕ ಸರ್ಕಾರವು ಅಧಿಸೂಚನೆಯನ್ನು ಹೊರಡಿಸಿದ್ದು, ರಿಟ್ ಅರ್ಜಿಯ ಅನುಬಂಧ–ಎ ಗೆ ಮಾಡಲಾದ ಆಕ್ಷೇಪಣೆಗೆ ಹೆಚ್ಚು ಪ್ರಾಧಾನ್ಯತೆ ನೀಡದಿರಲು ಸೂಚನೆ ನೀಡಲಾಗಿದೆಯೆಂದು ನಿವೇದಿಸಿದ್ದಾರೆ.

ನ್ಯಾಯಾಲಯದಲ್ಲಿ ಸಲ್ಲಿಸಲಾದ ಜ್ಞಾಪನಪತ್ರವನ್ನು ದಾಖಲೆಯೊಂದಿಗೆ ಇಡಬೇಕು.

2. ಈ ರಿಟ್ ಅರ್ಜಿಯನ್ನು ಸಲ್ಲಿಸುವ ಮೂಲಕ, ರಿಟ್ ಅರ್ಜಿದಾರ ಕಂಪನಿಯ ವಿಷಯದಲ್ಲಿ, ಚಾಮರಾಜನಗರ ಮೀಸಲು ಅರಣ್ಯ ಪ್ರದೇಶದ ಭಾಗವಾದ ಪ್ರಶ್ನಿತ ಕಾಫಿ ತೋಟವನ್ನು ಕ್ಲೇಮು ಮಾಡಿರುವ ಪ್ರಾಧಿಕಾರಿಗಳ ನಿರ್ಣಯವನ್ನು ಹಾಗೆಯೇ ದಿನಾಂಕ ಅಕ್ಟೋಬರ್ 21, 2016ರಲ್ಲಿ ಚಾಮರಾಜನಗರದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು ಹೊರಡಿಸಿದ ಆದೇಶವನ್ನು ಖಂಡಿಸಿದ್ದಾರೆ. ಇದರ ಜೊತೆಗೆ, ವಿಚಾರಣೆಯ ಸ್ವರೂಪವು ಭೂಮಿಯ ಮೇಲೆ ರಿಟ್ ಅರ್ಜಿದಾರ ಕಂಪನಿಯ ಹಕ್ಕುಗಳನ್ನು ಸ್ಪಷ್ಟಪಡಿಸಿದೆಯೆಂದು ಅಭಿಪ್ರಾಯಪಟ್ಟಿರುತ್ತಾರೆ.

3. ಸದರಿ ಅರಣ್ಯ ಮುಖ್ಯ ಸಂರಕ್ಷಣಾಧಿಕಾರಿಯು, ಡಿಸೆಂಬರ್ 16, 2015 ರಂದು ಅರ್ಜಿದಾರ ಕಂಪನಿಗೆ ನೋಟೀಸನ್ನು ನೀಡಿದ್ದು, ಕರ್ನಾಟಕ ಅರಣ್ಯ ನಿಯಮಗಳು, 1969ರ 69ನೇ ನಿಯಮದೊಂದಿಗೆ ಓದಲಾದ ಕರ್ನಾಟಕ ಅರಣ್ಯ ಅಧಿನಿಯಮ, 1963ರ (ಸಂಕ್ಷಿಪ್ತವಾಗಿ 'ಸದರಿ ಅಧಿನಿಯಮ')ದ 99ನೇ ಪ್ರಕರಣದ ಮೇರೆಗೆ ವಿಚಾರಣೆಯನ್ನು ಪ್ರಸ್ತಾಪಿಸಿರುವುದರ ಜೊತೆಗೆ ಎಸ್ಟೇಟು ಚಾಮರಾಜನಗರ ಮೀಸಲು ಅರಣ್ಯ ಪ್ರದೇಶದ ವ್ಯಾಪ್ತಿಯೊಳಗೆ ಬರುತ್ತದೆಂದು ಕ್ಲೇಮು ಮಾಡಿದ್ದಾರೆ. ರಿಟ್ ಅರ್ಜಿದಾರನಿಗೆ, ಆಸ್ತಿಯ ಆರ್ಜನೆ, ಭೋಗ್ಯ ಬಾಡಿಗೆ ಸಂದಾಯ, ಮರಮುಟ್ಟು ಮೌಲ್ಯ ವಿವರಗಳು ಮತ್ತು ಕಂಪನಿಯ ಸ್ವಾಧೀನದ ಅಡಿಯಲ್ಲಿ ಬರುವ ಯಾವುದೇ ಇತರ ಭೂಮಿಯ ಭಾಗದ ವಿವರಗಳಿಗೆ ಸಂಬಂಧಿಸಿದ ಮೂಲ ಅಥವಾ ಸಂಪೂರ್ಣ ದಾಖಲೆಗಳ ಪ್ರಮಾಣೀಕೃತ ಪ್ರತಿಗಳನ್ನು ಸಲ್ಲಿಸಲು ಸೂಚಿಸಲಾಗಿತ್ತು.

4. ಮೂಲತಃವಾಗಿ, ಆಸ್ತಿಯನ್ನು, 1895ನೇ ವರ್ಷದಲ್ಲಿ ಒಮ್ಮೆ ಶ್ರೀ ಸಿ.ಡಬ್ಲ್ಯು.ಜಿ. ಮಾರಿಸ್‌ರವರ ಹೆಸರಿನಲ್ಲಿ ಹಿಂದಿನ ಮೈಸೂರು ಮಹಾರಾಜರು ಬರೆದುಕೊಟ್ಟಿದ್ದರು. ಅವರು ಭೂಮಿಯನ್ನು ಕಾಫಿ ತೋಟವಾಗಿ ಪರಿವರ್ತಿಸಿದ್ದು, ಕಾಫಿ ಮತ್ತು ಪ್ರಾಸಂಗಿಕ ಬೆಳೆಗಳನ್ನು ಬೆಳೆಯುತ್ತಿದ್ದರು. ಮೂಲ ಅನುದಾನಿತ ಮತ್ತು ಅವನ ವಾರಸುದಾರರು ಭಾದ್ಯತೆಯಂತೆ ಆಗಾಗ್ಗೆ ವರ್ಗಾಯಿಸಿದ್ದರು. ರಿಟ್ ಅರ್ಜಿದಾರನು, 2007ನೇ ವರ್ಷದಲ್ಲಿ ಕ್ರಯಪತ್ರ ನೋಂದಣಿಯಾದ ಕಾರಣದಿಂದಾಗಿ ಸ್ವತ್ತನ್ನು ಆರ್ಜಿಸಿದ್ದಾರೆ. ಭೂಕಂದಾಯ ನಿರ್ಧರಣೆ ಹಕ್ಕು

ದಾಖಲೆಯಲ್ಲಿ ಮತ್ತು ಖಾತಾದಲ್ಲಿ ರಿಟ್ ಅರ್ಜಿದಾರನ ಹೆಸರನ್ನು ಸ್ವತ್ತಿನ ಮಾಲೀಕನೆಂದು ಬದಲಾವಣೆ ಮಾಡಲಾಗಿದ್ದು, ರಿಟ್ ಅರ್ಜಿದಾರನು, ನಿಯತವಾಗಿ, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಮೇರೆಗೆ ನಿರ್ಧರಿಸಲಾದಂಥ ತೆರಿಗೆಗಳನ್ನು ಸಂದಾಯ ಮಾಡಿರುತ್ತಾನೆ.

5. ಶ್ರೀ ವಿಜಯಶಂಕರ್‌ರವರು, ಸದರಿ ಎದುರುದಾರ ಸಂ.2 ಪ್ರಸ್ತುತ ವ್ಯವಹರಣೆ ಪ್ರಾರಂಭಿಸಿರುವುದನ್ನು ಪ್ರಶ್ನಿಸಿದ್ದು, ಸಂಪೂರ್ಣ ಪ್ರಕ್ರಿಯೆಯು ಯಾವುದೇ ಅಧಿಕಾರ ವ್ಯಾಪ್ತಿಯನ್ನು ಹೊಂದಿಲ್ಲವೆಂದು ನಿವೇದಿಸಿದ್ದಾರೆ. ಅವರು, ಎದುರುದಾರ ಸಂ.2, ಇವರು ಸದರಿ ಅಧಿನಿಯಮದ ಮೇರೆಗೆ ರಿಟ್ ಅರ್ಜಿದಾರನನ್ನು ಪ್ರಶ್ನಿಸುವ ಮತ್ತು ಹಕ್ಕನ್ನು ನಿರ್ಧರಿಸುವ ಪ್ರಾಧಿಕಾರಿಯಲ್ಲವೆಂದು ನಿವೇದಿಸಿದ್ದಾರೆ.

6. ಶ್ರೀ ವಿಜಯಶಂಕರ್‌ರವರು, ವ್ಯವಹರಣೆಗಳ ದಾಖಲೆಪತ್ರಗಳ ಕಡೆಗೆ ನಮ್ಮ ಗಮನವನ್ನು ಸೆಳೆದಿದ್ದು, ನಿರ್ದಿಷ್ಟವಾಗಿ, ದಿನಾಂಕ ಅಕ್ಟೋಬರ್ 21, 2016ರ ಆದೇಶಕ್ಕೆ ಹೆಚ್ಚು ಗಮನ ಸೆಳೆದಿದ್ದು, ಇಲ್ಲಿ, ಮೀಸಲು ಅರಣ್ಯ ಪ್ರದೇಶದ ಭಾಗವಾಗಿದ್ದ ಭೂಮಿಯನ್ನು ಪ್ರಾಧಿಕಾರಿಗಳು ಕ್ಲೇಮು ಮಾಡಿರುವುದರಿಂದ ಭೂಮಿಯ ಮೇಲಿರುವ ರಿಟ್ ಅರ್ಜಿದಾರನ ಅಧಿಕಾರವನ್ನು ಖಚಿತಪಡಿಸಲು ವ್ಯವಹರಣೆಯನ್ನು ಪ್ರಾರಂಭಿಸಿರುವುದನ್ನು 2ನೇ ಸಂಖ್ಯೆಯ ಎದುರುದಾರನು ಸ್ಪಷ್ಟವಾಗಿ ದಾಖಲಿಸಿರುವನು.

7. ಶ್ರೀ ಎಸ್. ವಿಜಯ್‌ಶಂಕರ್‌ರವರು ಮಂಡಿಸಿದ ನಿವೇದನೆಯನ್ನು ಮೌಲ್ಯಮಾಪನ ಮಾಡುವ ಸಲುವಾಗಿ, ನಾವು, ಕರ್ನಾಟಕ ಅರಣ್ಯ ಅಧಿನಿಯಮದ ಕೆಲವು ಉಪಬಂಧಗಳನ್ನು ಪರಿಗಣಿಸುವುದು ಅಗತ್ಯವಾಗಿದೆ.

ಸದರಿ ಅಧಿನಿಯಮದ 2ನೇ ಪ್ರಕರಣದ (6)ನೇ ಉಪ–ಪ್ರಕರಣವು, 'ಅರಣ್ಯ ಅಧಿಕಾರಿ' ಎಂಬ ಪದಾವಳಿಯನ್ನು ಈ ಮುಂದಿನಂತೆ ಪರಿಭಾಷಿಸಿದೆ:

> (6) 'ಅರಣ್ಯ ಅಧಿಕಾರಿ' ಎಂದರೆ, ರಾಜ್ಯ ಸರ್ಕಾರದಿಂದ ಅಥವಾ ಅದರ ಆದೇಶಗಳ ಮೇರೆಗೆ ಅಥವಾ ಕೆಳಗೆ ಚೀಫ್ ಕನ್ಸರವೇಟರ್,

ಕನ್ಸರವೇಟರ್, ಡೆಪ್ಯೂಟಿ ಕನ್ಸರವೇಟರ್, ಅಸಿಸ್ಟಂಟ್ ಕನ್ಸರವೇಟರ್, ಫಾರೆಸ್ಟ್ ರೇಂಜರ್, ಫಾರೆಸ್ಟರ್, ಫಾರೆಸ್ಟ್ ಗಾರ್ಡ್ ಅಥವಾ ಫಾರೆಸ್ಟ್ ವಾಚರ್ ಅಥವಾ ಈ ಅಧಿನಿಯಮದ ಮೇರೆಗೆ ಅಥವಾ ಅದರ ಕೆಳಗೆ ರಚಿಸಲಾದ ಯಾವುದೇ ನಿಯಮ ಅಥವಾ ಆದೇಶದ ಮೇರೆಗೆ ಒಬ್ಬ ಅರಣ್ಯ ಅಧಿಕಾರಿಯಿಂದ ನಿರ್ವಹಿಸಲ್ಪಡಬೇಕಾದ ಕಾರ್ಯಗಳನ್ನು ಮಾಡಲು ನೇಮಕವಾಗಿರುವ ವ್ಯಕ್ತಿ;

8. ಸದರಿ ಅಧಿನಿಯಮದ 2ನೇ ಪ್ರಕರಣದ (14)ನೇ ಉಪ–ಪ್ರಕರಣವು, ಸದರಿ ಅಧಿನಿಯಮದ IIನೇ ಅಧ್ಯಾಯದ ಉಪಬಂಧಗಳಿಗನುಸಾರವಾಗಿ ಹಾಗೆಯೇ ಯಾವುದೇ ಭೂಮಿಯನ್ನು ನಿರ್ಧರಿಸಿದಂಥ ಅಥವಾ ಅಧಿಸೂಚಿಸಿದಂಥ 'ಮೀಸಲು ಅರಣ್ಯ' ಎಂದು ಪರಿಭಾಷಿಸಿದೆ.

9. ಸದರಿ ಅಧಿನಿಯಮದ 4ನೇ ಪ್ರಕರಣದ (1)ನೇ ಉಪ–ಪ್ರಕರಣದ (ಸಿ) ಖಂಡವು ಯಾವುದೇ ವ್ಯಕ್ತಿಯ ಹೆಸರಿನಲ್ಲಿ ಅಂಥ ವ್ಯಾಪ್ತಿಯೊಳಗೆ ಬರುವ ಯಾವುದೇ ಜಮೀನಿನಲ್ಲಿ ಅಥವಾ ಅದರ ಮೇಲೆ, ಯಾವುದೇ ಅರಣ್ಯ ಉತ್ಪನ್ನದಲ್ಲಿ ಅಥವಾ ಅದರ ಮೇಲೆ ಕ್ಲೇಮು ಮಾಡಲಾದ ಅಥವಾ ಆಪಾದಿಸಲಾದ ಯಾವುದೇ ಹಕ್ಕುಗಳ ಇರುವಿಕೆ, ಸ್ವರೂಪ ಮತ್ತು ವ್ಯಾಪ್ತಿಯನ್ನು ವಿಚಾರಿಸಲು ಮತ್ತು ನಿರ್ಧರಿಸಲು ಮತ್ತು ಸದರಿ ಅಧಿನಿಯಮದ IIನೇ ಅಧ್ಯಾಯದಲ್ಲಿ ಉಪಬಂಧಿಸಲಾದಂತೆ ಇದನ್ನು ವ್ಯವಹರಿಸಲು ಅರಣ್ಯ ಕಂದಾಯ ವ್ಯವಸ್ಥೆ ಅಧಿಕಾರಿಯನ್ನು ನೇಮಕ ಮಾಡುವುದನ್ನು ಉಪಬಂಧಿಸುತ್ತದೆ.

10. ಇವನು ಅರಣ್ಯ ಅಧಿಕಾರಿಗಿಂತ ಭಿನ್ನ ವ್ಯಕ್ತಿಯಾಗಿರುತ್ತಾನೆ. ಇದು, ಸದರಿ ಅಧಿನಿಯಮದ 4ನೇ ಪ್ರಕರಣದ ಮೇರೆಗೆ (2)ನೇ ಉಪ–ಪ್ರಕರಣದ ಮೇರೆಗೆ, ಅರಣ್ಯ ಕಂದಾಯ ವ್ಯವಸ್ಥೆ ಅಧಿಕಾರಿಯಾಗಿ ನೇಮಕಗೊಂಡ ಅಧಿಕಾರಿಯು, ಅರಣ್ಯ ಕಂದಾಯ ವ್ಯವಸ್ಥೆ ಅಧಿಕಾರಿಯನ್ನು ಹೊರತುಪಡಿಸಿ ಯಾವುದೇ ಅರಣ್ಯ ಅಧಿಕಾರಿಯ ಹುದ್ದೆಯ ಸ್ಥಾನದಲ್ಲಿರುವ ವ್ಯಕ್ತಿಯಾಗಿರತಕ್ಕದ್ದಲ್ಲ ಎಂಬುದನ್ನು

ವ್ಯಕ್ತವಾಗಿ ಉಪಬಂಧಿಸಿತ್ತು. ಆದಾಗ್ಯೂ, ರಾಜ್ಯ ಸರ್ಕಾರವು, ಅರಣ್ಯ ಕಂದಾಯ ವ್ಯವಸ್ಥೆ ಅಧಿಕಾರಿಯ ಮೂಲಕ IIನೇ ಅಧ್ಯಾಯದ ಮೇರೆಗೆ ವಿಚಾರಣೆಯಲ್ಲಿ ಇದನ್ನು ಪ್ರತಿನಿಧಿಸಲು ಅರಣ್ಯ ಅಧಿಕಾರಿಯನ್ನು ನೇಮಿಸಬಹುದು.

11. 2ನೇ ಸಂಖ್ಯೆಯ ಎದುರುದಾರನು, ಸದರಿ ಅಧಿನಿಯಮದ 2ನೇ ಪ್ರಕರಣದ (6)ನೇ ಉಪ–ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಅರಣ್ಯ ಅಧಿಕಾರಿಯಾಗಿರುವವನು ಆದುದರಿಂದ, ಇವನು ಸದರಿ ಅಧಿನಿಯಮದ 4ನೇ ಪ್ರಕರಣದ (1)ನೇ ಉಪ–ಪ್ರಕರಣದ (ಸಿ) ಖಂಡದ ಮೇರೆಗೆ ನೇಮಕಗೊಂಡ ಅರಣ್ಯ ಕಂದಾಯ ವ್ಯವಸ್ಥೆ ಅಧಿಕಾರಿಯು ಇದನ್ನು ನಿರ್ಧರಿಸಬಹುದಾದಂತೆ ರಿಟ್ ಅರ್ಜಿದಾರನು ಕ್ಲೇಮು ಮಾಡಿದ ಹಕ್ಕು, ಅಧಿಕಾರ ಮತ್ತು ಹಿತಾಸಕ್ತಿಯ ಇರುವಿಕೆ ಸ್ವರೂಪ ಮತ್ತು ವ್ಯಾಪ್ತಿಯನ್ನು ವಿಚಾರಣೆಮಾಡಲು ಮತ್ತು ನಿರ್ಧರಿಸಲು ಸಕ್ಷಮನಾಗಿರುವುದಿಲ್ಲ ವೆಂಬುದನ್ನು ನಾವು ಗುರುತಿಸಿದ್ದೇವೆ.

12. ದಿನಾಂಕ ಅಕ್ಟೋಬರ್ 21, 2016ರ ಆದೇಶದಿಂದ ಸ್ವತ್ತು ಮೀಸಲು ಅರಣ್ಯವಾಗಿತ್ತೆನ್ನುವ ಭಾವನೆಯಲ್ಲಿ ಮುಂದುವರಿದು ರಿಟ್ ಅರ್ಜಿದಾರನ ಹಕ್ಕುಗಳನ್ನು ಖಚಿತಪಡಿಸುವ ಉದ್ದೇಶಕ್ಕಾಗಿ ವ್ಯವಹರಣೆಯನ್ನು ಪ್ರಾರಂಭಿಸಲಾಗಿತ್ತೆಂಬುದನ್ನು ನಾವು ಗುರುತಿಸಿದ್ದೇವೆ. 2ನೇ ಸಂಖ್ಯೆಯ ಎದುರುದಾರನು ಪ್ರಾರಂಭಿಸಿದ ವ್ಯವಹರಣೆ ಮತ್ತು ವಿಚಾರಣೆಯು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲ. ಹೀಗಾಗಿ 2ನೇ ಸಂಖ್ಯೆಯ ಎದುರುದಾರನ ಸಂಪೂರ್ಣ ಉಪ–ಕ್ರಮವು ಆರಂಭದಿಂದಲೇ ಶೂನ್ಯವಾದುದಾಗಿದೆ.

13. ಹೀಗಾಗಿ, ನಾವು, ದಿನಾಂಕ ಡಿಸೆಂಬರ್ 16, 2015ರ ಅನುಬಂಧ–ಬಿ ನಲ್ಲಿರುವ ನೋಟೀಸನ್ನು ಮತ್ತು ಅದರ ಅನುಸಾರವಾದ ಎಲ್ಲಾ ತರುವಾಯದ ವ್ಯವಹರಣೆಗಳನ್ನು ರದ್ದುಗೊಳಿಸಿರುತ್ತೇವೆ.

14. ನಾವು ರಿಟ್ ಅರ್ಜಿದಾರನಿಗೆ ಅವಕಾಶಗಳನ್ನು ನೀಡಿದ ನಂತರ ಕಾನೂನಿಗೆ ಅನುಸಾರವಾಗಿರುವ ಯುಕ್ತ ವ್ಯವಹರಣೆಗಳನ್ನು ಪ್ರಾರಂಭಿಸಲು ಪ್ರಾಧಿಕಾರಿಗಳ ಹಕ್ಕನ್ನು ಕಾಯ್ದಿರಿಸಿದ್ದೇವೆ.

15. ನಾವು ತೀರ್ಪು ನೀಡುವ ಮೊದಲು ನಾವು ರಿಟ್ ಅರ್ಜಿ ಇತ್ಯರ್ಥದಲ್ಲಿರುವ ಅವಧಿಯಲ್ಲಿ ಕಾಫಿ ಪ್ಲಾಂಟೇಷನ್‌ನಲ್ಲಾಗುವ ಕೃಷಿ, ಕೊಯ್ಲು, ಕೀಳುವುದು ಉತ್ಪನ್ನದ ಮಾರಾಟವನ್ನು ಮೇಲ್ವಿಚಾರಣೆ ಮಾಡಲು ಈ ನ್ಯಾಯಾಲಯದ ಪ್ರಾಕ್ಟೀಸಿಂಗ್ ಅಡ್ವೊಕೇಟ್ ಶ್ರೀ ಎಚ್. ವೆಂಕಟೇಶ್ ದೊಡ್ಡೇರಿಯವರನ್ನು, ವಿಶೇಷ ಅಧಿಕಾರಿಯಾಗಿ ನೇಮಕ ಮಾಡಿರುವುದನ್ನು ದಾಖಲಿಸಿದ್ದೇವೆ. ಅವರಿಗೆ ಲೆಕ್ಕಗಳನ್ನು ನಿರ್ವಹಿಸಲು ಸೂಚಿಸಲಾಗಿತ್ತು. ಅವರು ಸೂಚನೆಗಳನ್ನು ಅತೀ ಎಚ್ಚರಿಕೆಯಿಂದ ನಿರ್ವಹಿಸಿದ್ದು, ನಿಯತಕಾಲಿಕವಾಗಿ ವರದಿಗಳನ್ನು ಸಲ್ಲಿಸಿದ್ದಾರೆ. ನಾವು ಶ್ರೀ ವೆಂಕಟೇಶ್ ದೊಡ್ಡೇರಿಯವರ ವರದಿಗಳನ್ನು ಒಪ್ಪಿಕೊಂಡಿದ್ದು, ವಿಶೇಷ ಅಧಿಕಾರಿಯಾಗಿದ್ದ ಅವರನ್ನು ಬಿಡುಗಡೆಗೊಳಿಸಿರುತ್ತೇವೆ. ರಿಟ್ ಅರ್ಜಿದಾರನಿಗೆ 34,000/– ರೂ. (ಮೂವತ್ತನಾಲ್ಕು ಸಾವಿರ ರೂಪಾಯಿಗಳು ಮಾತ್ರ)ಗಳ ಹೆಚ್ಚಿನ ಸಂಭಾವನೆಯನ್ನು ಶ್ರೀ ವೆಂಕಟೇಶ್ ದೊಡ್ಡೇರಿಯವರಿಗೆ ನೀಡಲು ಸೂಚಿಸಲಾಗಿದೆ.

16. ಹೀಗಾಗಿ, ಈ ರಿಟ್ ಅರ್ಜಿಯನ್ನು ಹಿಂದೆ ಹೇಳಲಾದ ನಿರ್ದೇಶನದೊಂದಿಗೆ ವಿಲೇವಾರಿ ಮಾಡಲಾಗಿದೆ.

17. ನಾವು, ವೆಚ್ಚಗಳ ಸಂಬಂಧದಲ್ಲಿ ಯಾವುದೇ ಆದೇಶವನ್ನು ಮಾಡಿರುವುದಿಲ್ಲ.

---

2. 2016–ಟಿಐಒಎಲ್–905–ಹೆಚ್‌ಸಿ–ಕರ್ನಾಟಕ–ಸಿಎಕ್ಸ್